ಸುರಕ್ಷತೆಯ ರಸ್ತೆಯನ್ನಾಗಿ ಮಾರ್ಡಾಡಿಸಬೇಕಾದ ಅಗತ್ಯತೆ ಇದೆ ಎಂದು ಸರ್ಕಾರ ಗಮನಿಸಿದೆಯೇ?

ಇ. ಹಾಗಿದ್ದಲ್ಲಿ ಈ ರಸ್ತೆಯನ್ನು ಸುಧಾರಿಸಲು ಕೈಗೊಳ್ಳಲು ಉದ್ದೇಶಿಸಿರುವ ಕಾರ್ಯ ಕ್ರಮಗಳು ಯಾವುವು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ. ತಿರುವುಗಳಿಂದ ಅಪಘಾತವಾಗುವುದಿಲ್ಲ ಚಾಲಕರ ಅಜಾಗರೂಕತೆಯಿಂದಲೇ ಅಪಘಾತಗಳಾಗುವುದಕ್ಕೆ ಕಾರಣ

ಆ. ಗಮನಿಸಿದೆ.

ಇ. ತಿರುವುಗಳನ್ನು ಸಾಧ್ಯವಾದಷ್ಟು ನೇರ ಗೊಳಿಸಲು ಕಿರಿದಾಗಿರುವ ರಸ್ತೆಯ ಭಾಗಗಳನ್ನು ಅಗಲಗೊಳಿಸಿ ವಿಸ್ತರಿಸುವುದು ಹಾಗೂ ಅಗತ್ಯವಿದ್ದೆಡೆ ಸೂಚನಾ ಫಲಕಗಳನ್ನು ಅಳವಡಿಸುವುದನ್ನು ಕೈಗೊಳ್ಳಲಾಗಿದೆ.

ಗಡಿ ಪ್ರದೇಶದಲ್ಲಿ ವಾಸಿಸುವ ಜನರ ಭಾಷೆ

54(529)

ಶ್ರೀ ಲಿಂಗಪ್ಪ ಸಿ.ಎಂ.(ರಾಮನಗರ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಮ್ಮ ರಾಜ್ಯದ ಗಡಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ತಮಿಳು ತೆಲುಗು, ಮಲೆಯಾಳಂ ಮತ್ತು ಮರಾಠಿ ಭಾಷೆಗಳಲ್ಲಿ ಮಾತನಾಡುವ ಜನಾಂಗದವರಲ್ಲಿ ಕನ್ನಡದ ಸಂಸ್ಕೃತಿಯನ್ನು ಪರಿಚಯಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು?

ಆ) ಇದರಿಂದ ಕನ್ನಡ ನಾಡಿನ ಸಂಸ್ಕೃತಿಯ ಪರಿಚಯ ಈ ಎಲ್ಲಾ ಭಾಷೆಗಳನ್ನು ಮಾತನಾಡುವ ಜನಾಂಗದವರಿಗೆ ಎಷ್ಟರಮಟ್ಟಿಗೆ ಆಗಿದೆ?

ಇ) ಕನ್ನಡ ಸಂಸ್ಕೃತಿಯ ಪರಿಣಾಮಕಾರಿ ಪರಿಚಯ ಮೇಲ್ಕಂಡ ಎಲ್ಲಾ ಜನಾಂಗದವರಿಗಾಗದಿದ್ದಲ್ಲಿ ಕನ್ನಡ ನಾಡಿನ ವಾತಾವರಣಕ್ಕೆ ಹೊಂದಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬ ವಿಚಾರವನ್ನು ಸರ್ಕಾರ ಗಮನಿಸಿದೆಯೆ?

ಈ) ಕನ್ನಡ ನಾಡಿನ ಗಡಿನಾಡು ಪ್ರದೇಶಗಳಲ್ಲಿ ವಾಸಿಸುತ್ತಿರುವ ಅನ್ಯ ಭಾಷಿಯರು

ನ್ನಡ ನಾಡಿನ ಸಂಸ್ಕೃತಿಯ ಬಗ್ಗೆ ಸಾಕಷ್ಟು ಪರಿಜ್ಞಾನ ಹೊಂದಲು ಸರ್ಕಾರ ಕೈಗೊಳ್ಳಲು ುದ್ದೇಶಿಸಿರುವ ಕ್ರಮಗಳು ಯಾವುವು?

ಶ್ರೀಮತಿ ರಾಣಿ ಸತೀಶ್ (ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ರಾಜ್ಯದ ಗಡಿ ಪ್ರದೇಶಗಳಲ್ಲಿ ಕನ್ನಡ ಸಂಸ್ಕೃತಿಯನ್ನು ಕನ್ನಡೇತರರಿಗೆ ರಿಚಯಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಇಲಾಖೆಯು ಹಮ್ಮಿಕೊಂಡಿದೆ.

1) ಗಡಿನಾಡ ಉತ್ಸವಗಳು

2) ಸಂಸ್ಕೃತಿ ಕಾರ್ಯಕ್ರಮಗಳ ಏರ್ಪಾಟು

3) ಸಂಘ ಸಂಸ್ಥೆಗಳ ಹಾಗೂ ಶಾಲೆಗಳ ಗ್ರಂಥಾಲಯಗಳಿಗೆ ಕನ್ನಡ ಪುಸ್ತಗಳ ನುಚಿತ ಪೂರೈಕೆ.

ಆ) ಗಡಿನಾಡ ಉತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದಾಗ ನ್ಯಭಾಷಿಗರು ಈ ಸಮಾರಂಭಗಳಿಗೆ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ.

ಇ) ಇಲ್ಲಾ

ಈ) 'ಅ'ದಲ್ಲಿ ಹೇಳಿದಂತೆ ಮತ್ತು ಈ ಕಾರ್ಯಕ್ರಮಗಳನ್ನು ಇನ್ನೂ ತೀವ್ರ ಹಾಗೂ ವ್ಯಾಪಕಗೊಳಿಸಲಾಗುವುದು.

ಕೆ.ಎಂ.ಎಫ್‌ನ ಹಾಲು ಪೂರೈಕೆ.

55(531)

ಶ್ರೀ ಸಿ.ಎಂ.ಲಿಂಗಪ್ಪ (ರಾಮನಗರ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಂ.ಎಫ್. ಬೆಂಗಳೂರು ಹಾಲಿನ ಡೇರಿಯು ಪೂರೈಸುತ್ತಿರುವ ಹಾಲಿನ ಗುಣಮಟ್ಟ ಹಾಗೂ ಪೂರೈಕೆಯ ಪ್ರಮಾಣದಲ್ಲಿ ಆಗುತ್ತಿರುವ ವ್ಯತ್ಯಾಸಗಳ ಬಗ್ಗೆ ರ್ಕಾರವು ಗಮನಿಸಿದೆಯೇ?

ಆ) ಹಾಗಿದ್ದಲ್ಲಿ ಈ ನಿಟ್ಟನಲ್ಲಿ ಕೈಗೊಂಡ ಕ್ರಮವೇನು?

ಇ) ಶೀತಲೀಕರಣ ಕೇಂದ್ರಗಳಿಂದ ಮುಖ್ಯ ಡೇರಿಗೆ ಹಾಲು ರವಾನೆಯಾಗುವ